

# ಮರೆವು ಮತ್ತು ಕನ್ನಡಕ

ಮಗುವೆ ತಾ ನನ್ನ ಕನ್ನಡಕ
ಕಾಣವು ಅಕ್ಷರ ಕಡೆತನಕ
ನೋಡುವೆ ಏತಕೆ ನನ್ನ ಮುಖ
ನಗೆಯೊಳಡಗಿಸಿ ಮುಗ್ಧ ಮುಖ

ಪತ್ರಿಕೆ ಓದುತ ಕುಳಿತಿದ್ದೆ
ಹಾಗೆಯೆ ನಿದ್ರೆಗೆ ಜಾರಿದ್ದೆ
ಚಾಳೀಸು ಇರಿಸಿ ಕಾಣುವ ಹಾಗೆ
ತುಂಟನ ಕೈಗೆ ಎಟುಕದ ಜಾಗೆ

ಕಾಡಿಸಬೇಡ ಮುದ್ದಿನ ಪುಟ್ಟ
ಕೊಡುವೆನು ನೋಡು ಮೆತ್ತನೆ ಪೆಟ್ಟ

ಓದದೆ ಹೋದರೆ ಪತ್ರಿಕೆ ಪೂರ
ಕಾಲವು ಸರಿಯದು ಬಲು ಬೇಜಾರ

ಕುಲು ಕುಲು ನಗುತಿರೆ ಬಿಡದೆಲೆ ಪಟ್ಟು
ಎಲ್ಲರ ಮೊಗದಲಿ ಅಡಗಿದೆ ಗುಟ್ಟು
ತಿಳಿಯಿತು ಬಿಡು ನಾ ಬಿದ್ದೆನು ಬೇಸ್ತು
ಮೂಗಿನ ಮೇಲಿರೆ ಅರಸುತ ಸುಸ್ತು

ವಯಸ್ಸಾದಂತೆ ಮರೆವದು ಜಾಸ್ತಿ
ನಿನ್ನೊಡನಾಡುತೆ ಪ್ರೀತಿಯ ಕುಸ್ತಿ
ಕನ್ನಡಕವೆಂಬುದು ಆಟಿಗೆ ಆಸ್ತಿ
ಮರೆಯುವುದುಂಟೆ ಈ ಮೋಜು ಮಸ್ತಿ

● **ಡಾ. ನಿತ್ಯಾನಂದ ಸುಂಡವಾಳು**